# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 17.07.2023 ರಂದು ಮಧ್ಯಾಹ್ನ: 3:15 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕೊಠಡಿಯಲ್ಲಿ ಆನ್‌ಲೈನ್ ONLINE ಮೂಲಕ ನಡೆದ 2022–23ನೇ ಸಾಲಿನ ಎರಡನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಎಂ. ವೆಂಕಟೇಶ್ವರಲು, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಹೆಚ್. ಪಿ. ವೀರಭದ್ರಸ್ವಾಮಿ,<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 3. | ಡಾ. ಪ್ರಸನ್ನ, ಪ್ರಾಂಶುಪಾಲರು,<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | ಸದಸ್ಯರು |
| 4. | ಡಾ. ಚಿತ್ತರಂಜನ್ ರೈ,<br>ಪ್ರಾಂಶುಪಾಲರು, ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು | ಸದಸ್ಯರು |
| 5. | ಶ್ರೀಮತಿ ವಸಂತ ಟಿ.ಡಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು. | ಸದಸ್ಯರು |
| 6. | ಡಾ. ಶ್ರೀಧರ್ ಎನ್.<br>ಪ್ರಾಂಶುಪಾಲರು, ಶ್ರೀಮತಿ ಮತ್ತು ಶ್ರೀ ವೈ.ಇ.ರಂಗಯ್ಯಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ. | ಸದಸ್ಯರು |
| 7. | ಡಾ. ಮಾಲತಿ ವಿ.,<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು. | |
| 8. | ಡಾ. ಸಿ. ವಿಜಯ್ ಭಾಸ್ಕರ್<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 9. | ಡಾ. ಜಾಯ್ ನೆರೆಲ್ಲಾ,<br>ಪ್ರಾಂಶುಪಾಲರು, ಯೂನಿಯನ್ ಕ್ರಿಶ್ಚಿಯನ್ ಕಾಲೇಜು, ಶಿರಾ ಗೇಟ್, ತುಮಕೂರು | |
| 10. | ಡಾ. ನೂರ್‌ಅಫ್ಜಾ<br>ಪ್ರಾಧ್ಯಾಪಕರು, ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 11. | ಡಾ. ಜಿ. ಸುದರ್ಶನ ರೆಡ್ಡಿ<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 12. | ಡಾ. ಅಣ್ಣಮ್ಮ<br>ಪ್ರಾಧ್ಯಾಪಕರು, ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 13. | ಡೀನರು, ಕಲಾ ನಿಕಾಯ | ಸದಸ್ಯರು |
| 14. | ಶ್ರೀಮತಿ ಲತಾ ಬಿ.ಎಸ್. ಡೀನರು, ಶಿಕ್ಷಣ ನಿಕಾಯ, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | ಸದಸ್ಯರು |
| 15. | ಪ್ರೊ. ಜಿ. ಬಸವರಾಜ<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 16. | ಡಾ. ಸಂಪತ್ ಕುಮಾರ್ ಬಿ.ಟಿ., ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 17. | ಡಾ. ಪಾಟೀಲ್ ಮಲ್ಲಿಕಾರ್ಜುನ.ಬಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |

| | | |
|---|---|---|
| 18. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 19. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು**

| | | |
|---|---|---|
| 1. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ ಅಥವಾ ಅವರ ಪ್ರತಿನಿಧಿ ನಿರ್ದೇಶಕರು, ಕಾರ್ಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | **ಡಾ. ನಿತ್ಯಾನಂದ ಬಿ. ಶೆಟ್ಟಿ**<br>ಪ್ರಾಧ್ಯಾಪಕರು, ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 4. | **ಡಾ. ಮನೋಹರ್ ಶಿಂಧೆ,**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 5. | **ಡೀನರು,** ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 6. | **ಡೀನರು,** ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ನಿಕಾಯ | ಸದಸ್ಯರು |
| 7. | **ಪ್ರೊ. ಕೆ. ನರಹರಿ,**<br>ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |
| 8. | **ದೀಪಿಕಾ ಎ ವೈಷ್ಣವ್, ಪ್ರಥಮ ಬಿ.ಎ. ಇಂಗ್ಲೀಷ್, ತುಮಕೂರು.** | ಸದಸ್ಯರು |
| 9. | **ಸಮೀರಾ ಸಿ.ಜೆ. ಪ್ರಥಮ ಬಿ.ಎಸ್ಸಿ, ಕ್ರೀಢಾ ವಿಭಾಗ, ತುಮಕೂರು.** | ಸದಸ್ಯರು |
| 10. | **ರಂಜಿತಾ ಕೆ.ಎನ್.** ಪ್ರಥಮ ಎಂ.ಎಸ್.ಡಬ್ಲ್ಯು. ಸ್ನಾತಕೋತ್ತರ ವಿಭಾಗ. | ಸದಸ್ಯರು |
| 11. | **ಸೈಯೆದಾ ಹನಿಯಾ,** ಪ್ರಥಮ ಬಿ.ಎ. ಇಂಗ್ಲೀಷ್, ಎನ್.ಸಿ.ಸಿ. ವಿಭಾಗ | ಸದಸ್ಯರು |
| 12. | **ಅರ್ಚನಾ ಎಸ್.** ಪ್ರಥಮ ಬಿ.ಕಾಂ., ಎನ್.ಎಸ್.ಎಸ್ ಕೋಶ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು. | ಸದಸ್ಯರು |
| 13. | **ದಿವ್ಯರಾಣಿ ಕೆ.** ಸಂಶೋಧನಾ ವಿದ್ಯಾರ್ಥಿ, ರಸಾಯನಶಾಸ್ತ್ರ ವಿಭಾಗ, ತುಮಕೂರು. | ಸದಸ್ಯರು |

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರು ದಿನಾಂಕ:17.07.2023 ಸೋಮವಾರ ಮಧ್ಯಾಹ್ನ: 3.15ಕ್ಕೆ ನಡೆದ 2022–23ನೇ ಸಾಲಿನ ಎರಡನೇ ವಿಶೇಷ ವಿದ್ಯಾವಿಷಯಕ ಪರಿಷತ್ ಆನ್‌ಲೈನ್ (ONLINE) ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರಮ ಸಂಖ್ಯೆ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | **ಕಾಲೇಜು ಅಭಿವೃದ್ಧಿ ಪರಿಷತ್** | |
| 1. | 2022–23.ದ್ವಿ.ವಿ.ವಿ.ಪ–02 ಕಾ.ಅ.ಪ.–01 | 2023–24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಕೆಲವು ಕಾಲೇಜುಗಳಿಗೆ ಭೇಟಿ ನೀಡಿ UUCMS ತಂತ್ರಾಂಶದ ಮುಖಾಂತರ ಸಲ್ಲಿಸಿರುವ ವರದಿಗಳ ಅನುಮೋದನೆ ಕುರಿತು. | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಹೊಂದಿರುವ (04) ಕಾಲೇಜುಗಳಾದ ಸರ್ವೋದಯ ಪ್ರಥಮ ದರ್ಜೆ ಕಾಲೇಜು, ತುಮಕೂರು., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, |

| | | | |
|---|---|---|---|
| | | | ತಿಪಟೂರು., ಮತ್ತು ಶೇಷಾದ್ರಿಪುರಂ ಕಾಲೇಜು, ತುಮಕೂರು ಈ ಕಾಲೇಜುಗಳಿಗೆ ಸಂಯೋಜನೆ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ವರದಿಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಿತು. ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವ ಕಾಲೇಜುಗಳಿಗೆ ಸದರಿ ಸಮಿತಿಗಳು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2023–24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಮುಂದುವರಿಕೆಯನ್ನು ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>**ಸ್ನಾತಕ ಪದವಿ ಪ್ರವೇಶಮಿತಿ ಹೆಚ್ಚಳ:**<br><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations)ಪಾಲಿಸುವ ಷರತ್ತಿಗೊಳಪಟ್ಟು 2023–24ನೇ ಶೈಕ್ಷಣಿಕ ಸಾಲಿನಿಂದ BCA ಕೋರ್ಸಿಗೆ 50 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| | | | <u>ಸ್ನಾತಕ ಪದವಿ ಹೊಸ ಕೋರ್ಸ್:</u><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations)ಪಾಲಿಸುವ ಷರತ್ತಿಗೊಳಪಟ್ಟು 2023–24ನೇ ಶೈಕ್ಷಣಿಕ ಸಾಲಿನಿಂದ BCA ಕೋರ್ಸಿಗೆ 50 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br><u>ಸ್ನಾತಕೋತ್ತರ ಪದವಿ ಹೊಸ ಕೋರ್ಸ್‌ಗಳು:</u><br>ಶೇಷಾದ್ರಿಪುರಂ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations)ಪಾಲಿಸುವ ಷರತ್ತಿಗೊಳಪಟ್ಟು 2023–24ನೇ ಶೈಕ್ಷಣಿಕ ಸಾಲಿನಿಂದ M.B.A. ಮತ್ತು M.C.A. ಹೊಸ ಕೋರ್ಸುಗಳಿಗೆ ತಲಾ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸುಗಳು) ಮಂಜೂರು ಮಾಡಬಹುದೆಂದು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| | | | **ಹೊಸ ಕಾಲೇಜು:**<br><br>ಎ. ಆರ್. ರೆಹಾನ್ ಶಿಕ್ಷಣ ಸಂಸ್ಥೆ, ಶಿರಾ ಇವರು ಪ್ರಾರಂಭಿಸಲು ಉದ್ದೇಶಿಸಿರುವ ಎ.ಆರ್. ರೆಹಾನ್ ಪ್ರಥಮ ದರ್ಜೆ ಕಾಲೇಜು, ಶಿರಾ, ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ, ಹೊಸ ಕಾಲೇಜಿನ ಸಂಯೋಜನೆಗೆ ಕನಿಷ್ಠ ಶೇ.45% ಬದಲಿಗೆ ಶೇ.12.38% ಅಂಕ ಪಡೆದಿರುವುದರಿಂದ BCA ಕೋರ್ಸಿನ 60 ಸೀಟುಗಳಿಗೆ ಶಿಫಾರಸ್ಸು ಮಾಡಿರುವುದಿಲ್ಲವೆಂಬ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಪರಿಶೀಲಿಸಿ ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

**ಮಾನ್ಯ ಕುಲಸಚಿವರು**

**ಮಾನ್ಯ ಕುಲಪತಿಗಳು**